ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯ ಮಂತ್ರಿ ಮಾನ್ಯ ಅಧ್ಯಕ್ಷರೇ;

1951ರ ರಾಜ್ಯ ಹಣಕಾಸು ಸಂಸ್ಥೆ ಅಧಿನಿಯಮ 38(3)ನೇ ಕಲಂ ಮೇರೆಗೆ;

1. 1998-99ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 40ನೇ ವಾರ್ಷಿಕ ವರದಿ;

1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 47(ಎ) ಕಲಂ ಮೇರೆಗೆ;

2. 1998-99ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

1964ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ 17(1) ನೇ ಪ್ರಕರಣದ ಮೇರೆಗೆ;

3. 1996-97ನೇ ಸಾಲಿನ ಬೆಂಗಳೂರು ಜಲಮಂಡಳಿಯ ವಾರ್ಷಿಕ ಲೆಕ್ಕ ಮತ್ತು ಲೆಕ್ಕ ಪರಿಶೋಧನಾ ವರದಿ;

1948ರ ಕರ್ನಾಟಕ ವಿದ್ಯುಚ್ಛಕ್ತಿ ಅಧಿನಿಯಮದ 59ನೇ ಕಲಂ ಮೇರೆಗೆ;

4. 1997-98ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಲೆಕ್ಕಗಳು ಮತ್ತು ಆಸ್ತಿ ಹೊಣೆ ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿ) ಅವರ ಪರವಾಗಿ ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ ಮಾನ್ಯ ಅಧ್ಯಕ್ಷರೆ, 1980-ರ ಕಾಡಾ ಅಧಿನಿಯಮ 25ನೇ ಕಲಂ ಮೇರೆಗೆ;

1. 1997-98ನೇ ಸಾಲಿನ ಕಾಡಾ ಮಲಪ್ರಭ ಮತ್ತು ಘಟಪ್ರಭ ಯೋಜನೆಗಳ ಬೆಳಗಾಂನ ವಾರ್ಷಿಕ - ವರದಿ;

2. 1998-99ನೇ ಸಾಲಿನ ಕಾಡಾ ಕಾವೇರಿ ಜಲಾನಯನ ಯೋಜನೆಗಳ ಮೈಸೂರಿನ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III ಶ್ರೀ ಎಂ.ವೈ.ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ); ಮಾನ್ಯ ಅಧ್ಯಕ್ಷರೆ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 300(5)ನೇ ಪ್ರಕರಣದ ಮೇರೆಗೆ;

1. 199-798ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

2. 1998-99ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಪ್ರಕರಣದ ಮೇರೆಗೆ;

3. 1996-97ನೇ ಸಾಲಿನ ರಾಯಚೂರು ಜಿಲ್ಲಾ ಪಂಚಾಯತ್‌ನ ಲೆಕ್ಕಪರಿಶೋಧನಾ ವರದಿ;

4. 1996-97ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯಿತ್‌ನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

IV ಶ್ರೀಮತಿ ಮೋಟಮ್ಮ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619 ಎ ಪ್ರಕರಣದ ಮೇರೆಗೆ;

1997-98 ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 11ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

V ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಮಂತ್ರಿ) ಮಾನ್ಯ ಅಧ್ಯಕ್ಷರೆ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಹಾಗೂ 49ನೇ ಕಲಂ ಮೇರೆಗೆ;

1. 1997-98ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಾರ್ಷಿಕ ವರದಿ;

2. 1997-98ನೇ ಸಾಲಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧವಾ ಪರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VI ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಸಮಾಜ ಕಲ್ಯಾಣ ಮಂತ್ರಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619(ಎ) ಕಲಂ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VII ಶ್ರೀ ಎಂ.ಧರಮ್‌ಸಿಂಗ್ ನಾರಾಯಣ್‌ಸಿಂಗ್ (ಮಾನ್ಯ ಲೋಕೋಪಯೋಗಿ ಮಂತ್ರಿ) ಅವರ ಪರವಾಗಿ ಶ್ರೀ ಡಿ.ಬಿ.ಚಂದ್ರೇಗೌಡ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) ಮಾನ್ಯ ಅಧ್ಯಕ್ಷರೆ.

1956ರ ಕಂಪನಿಗಳ ಕಾಯ್ದೆಯ 619 (ಎ) ಕಲಂ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VIII ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಮಂತ್ರಿ) ಅವರ ಪರವಾಗಿ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) ಮಾನ್ಯ ಅಧ್ಯಕ್ಷರೆ

1956ರ ಕಂಪನಿಗಳ ಕಾಯ್ದೆಯ 619 (ಎ) ಕಲಂ ಮೇರೆಗೆ;

1. 1997-98ನೇ ಸಾಲಿನ ಕರ್ನಾಟಕ ಸ್ಟೇಟ್ ಇಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್‌ನ ಇಪ್ಪತ್ತೊಂದನೆಯ ವಾರ್ಷಿಕ ವರದಿ;
2. 1997-98ನೇ ಸಾಲಿನ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್‌ನ ವರದಿ;
3. 1997-98ನೇ ಸಾಲಿನ ಮೈಸೂರು ಬಣ್ಣ ಮತ್ತು ಅರಗು ನಿಯಮಿತದ ವಾರ್ಷಿಕ ವರದಿ;
4. 1997-98ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

IX ಶ್ರೀ ಎಂ. ಮಹದೇವ್ (ಮಾನ್ಯ ರೇಷ್ಮೆ ಮತ್ತು ಜವಳಿ ಮಂತ್ರಿ) ಅವರ ಪರವಾಗಿ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) ಮಾನ್ಯ ಅಧ್ಯಕ್ಷರೆ.

1956 ಕಂಪನಿಗಳ ಕಾಯ್ದೆಯ 619(ಎ) ಕಲಂ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ರಾಜ್ಯ ವಿದ್ಯುತ್ ಮ ಗ್ಗ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(2) ಮಂತ್ರಿಗಳ ಗೈರುಹಾಜರಿ ಬಗ್ಗೆ (ಅಧ್ಯಕ್ಷರಿಂದ ತೀರ್ಪು)

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಮಲ್ಲಿಕಾರ್ಜುನಖರ್ಗೆಯವರೇ, ಮೊದಲ ಅಧಿವೇಶನದ ಪ್ರಾರಂಭದ ಮೂರನೇ ದಿನದಲ್ಲೇ ಹೀಗಾದರೆ ಹೇಗೆ? ನಮ್ಮ ಅಧಿಕಾರದ ಅವಧಿಯಲ್ಲಿ ಮೂರು ವರ್ಷಗಳಾದ ಮೇಲೆ ನಮಗೆ ಈ ಖಾಯಿಲೆ ಅಂಟಿಕೊಂಡಿತ್ತು. 42 ಜನ ಮಂತ್ರಿಗಳು ಇದ್ದರೂ ಸಹಿತ ಕಾಗದ ಪತ್ರಗಳನ್ನು ಮಂಡಿಸಲಿಕ್ಕೆ ಸಂಬಂಧಪಟ್ಟ ಮಂತ್ರಿಗಳು ಅಧಿವೇಶನಕ್ಕೆ ಬರುವುದಿಲ್ಲ ಎನ್ನುವುದಾದರೆ, ಇದು ನಿಜವಾಗಿಯೂ ನಮ್ಮ ವ್ಯವಸ್ಥೆಗೆ ಸರಿಯಾದ ಪ್ರತಿಬಿಂಬ ಅಲ್ಲ ಎಂದು ಹೇಳುತ್ತೇನೆ. ತಾವೇನು ಹಿಂದೆ ಹೇಳುತ್ತಿದ್ದಿರೋ ಅದನ್ನೇ ನಾವು ಇವತ್ತು ಇಲ್ಲಿ ರಿಪೀಟ್ ಮಾಡುತ್ತಿದ್ದೇವೆ.